ಓ ಎಸ್ **184/17**

ಪಿ ಡಬ್ಲ್ಯೂ **-1**

**ದಿಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದ ಃ

ಈ ದಾವೆಯನ್ನು ಆಸ್ತಿಯಲ್ಲಿ ಭಾಗ ಬೇಕೆಂದು ನಾನು ಹೂಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ್ ನಾನು ಓದದೇ ಇರುವುದರಿಂದ ನನಗೆ ಗೊತ್ತಿಲ್ಲ. ಅದು ಎಷ್ಟು ಎಕರೆ ಗೊತ್ತಿಲ್ಲ. ಅದು ಕೇತೋಹಳ್ಳಿಯಲ್ಲಿ ಇರುತ್ತದೆ. ಕರಿತಿಮ್ಮಯ್ಯ ನನ್ನ ತಾತ ಆಗಿರುತ್ತಾರೆ. ಕರಿತಿಮ್ಮಯ್ಯರವರ ಹೆಂಡತಿ ರಂಗಮ್ಮ ಎಂದರೆ ಸರಿ. ನನ್ನ ತಾತನಿಗೆ ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಕರಿತಿಮ್ಮಯ್ಯರವರನ್ನು ನಾನು ಸಣ್ಣ ಮಗುವಿದ್ದಾಗ ನೋಡಿದ್ದೆ. ಅವರು ತೀರಿಕೊಂಡು ಎಷ್ಟು ವರ್ಷಗಳು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅವರ ಮರಣ ಪ್ರಮಾಣ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ರಂಗಮ್ಮರವರು ತೀರಿಕೊಂಡಾಗ ನಾನು ಸಣ್ಣ ಮಗುವಾಗಿದ್ದೆ. ಕರಿತಿಮ್ಮಯ್ಯರವರಿಗೆ 3 ಜನ ಮಕ್ಕಳು ಅವರು ರಂಗಯ್ಯ, ರಾಮಯ್ಯ ಮತ್ತು ರುದ್ರಯ್ಯ ಆಗಿರುತ್ತಾರೆ. ಕರಿತಿಮ್ಮಯ್ಯರವರು ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ಸಾಕ್ಷಿ ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಕರಿತಿಮ್ಮಯ್ಯರವರ ಹೆಣ್ಣು ಮಕ್ಕಳ ಹೆಸರು ರಂಗಮ್ಮ ಮತ್ತು ಕರಿಯಮ್ಮ ಆಗಿರುತ್ತದೆ. ರಂಗಮ್ಮರವರನ್ನು ತುಮಕೂರು ಹತ್ತಿರ ಯಾವುದೋ ಊರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ರಂಗಮ್ಮನ ಮಕ್ಕಳು ಬದುಕಿರುತ್ತಾರೆ ಎಂದರೆ ಸರಿ. ಕರಿಯಮ್ಮನ ಮಕ್ಕಳು ಬದುಕಿರುತ್ತಾರೆ ಎಂದರೆ ಸರಿ. ಕರಿತಿಮ್ಮಯ್ಯರವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದು ಈ ದಾವೆಯಲ್ಲಿ ಹೇಳಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಈ ವಿಚಾರವನ್ನು ಹೇಳಿರುವುದಿಲ್ಲ. ಕರಿತಿಮ್ಮಯ್ಯನವರ ಗಂಡು ಮಕ್ಕಳು ಬೇರೆ ಬೇರೆ ಮನೆಗಳಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಾನು ಮದುವೆಯಾಗುವ ಮುಂಚೆಯಿಂದಲೂ ಅವರು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರು ಬೇಸಾಯ ಕೂಡ ಬೇರೆ ಬೇರೆಯಾಗಿ ಮಾಡುತ್ತಿದ್ದರು ಎಂದರೆ ಸರಿ. ರಂಗಯ್ಯರವರಿಗೆ ವಾಸದ ಮನೆ ಬಂದಿತ್ತು ಎಂದರೆ ಸರಿ. ರಂಗಯ್ಯನ ಭಾಗಕ್ಕೆ ಬಂದ ಮನೆ ಈಗ ಯಾರ ಹೆಸರಿನಲ್ಲಿರುತ್ತದೆ ಎಂದರೆ ಭಾಗಕ್ಕೆ ಬಂದಿದ್ದು ಅದು ಯಾರ ಹೆಸರಿನಲ್ಲಿರುತ್ತದೆ ಗೊತ್ತಿಲ್ಲ. ರಂಗಯ್ಯರವರ ಹೆಸರಿನಿಂದ ನನ್ನ ತಮ್ಮನ ಹೆಸರಿಗೆ ಯಾವುದೇ ಖಾತೆ ಮಾಡಿಕೊಂಡಿಲ್ಲ. ರಂಗಯ್ಯನ ಭಾಗಕ್ಕೆ ಬಂದ ಮನೆಯಲ್ಲಿ ನನ್ನ ತಮ್ಮಂದಿರು ಯಾರು ಯಾರು ವಾಸವಾಗಿದ್ದರು ಗೊತ್ತಿಲ್ಲ. ಆ ಮನೆ ಬಿದ್ದು ಹಾಳಾಗಿರುತ್ತದೆ. ರಂಗಯ್ಯನ ಭಾಗಕ್ಕೆ ಮನೆ ಬಂದಿತ್ತು ಎಂದು ಈ ದಾವೆಯಲ್ಲಿ ಹೇಳಿಲ್ಲ. ಅದೇ ರೀತಿ ರುದ್ರಯ್ಯರವರಿಗೂ ಒಂದು ಮನೆ ಭಾಗದಲ್ಲಿ ಹೋಗಿತ್ತು ಎಂದರೆ ಸರಿ. ಆ ಮನೆಯಲ್ಲಿ ರುದ್ರಯ್ಯರವರು ವಾಸವಾಗಿರುತ್ತಾರೆ ಎಂದರೆ ಆ ಮನೆ ಪಾಳು ಬಿದ್ದುಹೋಗಿರುತ್ತದೆ ಎಂದು ನುಡಿಯುತ್ತಾರೆ. ರಾಮಯ್ಯರವರಿಗೂ

ಒಂದು ಮನೆ ಬಂದಿತ್ತು ಎಂದರೆ ಸರಿ. ರಾಮಯ್ಯನ ಮನೆಯು ಕೂಡ ಪಾಳು ಬಿದ್ದುಹೋಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಸಣ್ಣವಳಾಗಿದ್ದಾಗಲೇ ಕರಿತಿಮ್ಮಯ್ಯರವರ ಗಂಡು ಮಕ್ಕಳು ಅವರವರ ಭಾಗದ ಜಮೀನುಗಳನ್ನು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ ಸ್ವಲ್ಪ ಸ್ವಲ್ಪ ಮಾಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ರಂಗಯ್ಯರವರಿಗೆ ಎಷ್ಟು ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನಲ್ಲಿ ನಾನು ವ್ಯವಸಾಯ ಮಾಡಿಲ್ಲ. ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನ ಖಾತೆ ಯಾರ ಹೆಸರಿನಲ್ಲಿರುತ್ತದೆ ಗೊತ್ತಿಲ್ಲ. ಬಹಳ ಹಿಂದೆಯೇ ಅವರವರ ಹೆಸರಿಗೆ ಬಂದ ಜಮೀನಿಗೆ ಅವರವರು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಯಾವ ಜಮೀನು ನಮ್ಮ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದು ನಾನು ನನ್ನ ಸಹೋದರರ ಹತ್ತಿರ ಕೇಳಿರುವುದಿಲ್ಲ. ನಮ್ಮ ತಂದೆಯ ಭಾಗಕ್ಕೆ ಬಂದ ಜಮೀನಿನ ಉಳುಮೆಯನ್ನು ನನ್ನ ತಮ್ಮಂದಿರೇ ಮಾಡುತ್ತಿದ್ದಾರೆ. ಆ ಜಮೀನನ್ನು ಈ ದಾವೆಗೆ ಸೇರಿಸಿರುವುದಿಲ್ಲ. ಈ ದಾವೆಯನ್ನು ನಾನು ರುದ್ರಯ್ಯನ ಭಾಗಕ್ಕೆ ಬಂದ ಜಮೀನಿನ ಮೇಲೆ ಹಾಕಿರುವುದಿಲ್ಲ ಬದಲಾಗಿ ನಮ್ಮ ತಾತನ ಆಸ್ತಿ ನಮ್ಮ ತಂದೆಗೆ ಬಂದಂತಹ ಆಸ್ತಿಯ ಭಾಗ ಕೇಳಿ ಹಾಕಿರುತ್ತೇನೆ. ಕೇತೋಹಳ್ಳಿಯಲ್ಲಿ ನಮ್ಮ ತಂದೆಗೆ ಎಷ್ಟು ಜಮೀನು ಇತ್ತು ಎಂದರೆ ಗೊತ್ತಿಲ್ಲ.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**